ಈ) ಹಾಗಿದ್ದಲ್ಲಿ, ಯಾವ ಯಾವ ಸ್ಥಳದಲ್ಲಿ ಎಷ್ಟೆಷ್ಟು ಅಳ ಹಾಗೂ ಉದ್ದದಲ್ಲಿ ಸುರಂಗ ಮಾರ್ಗ ಮಾಡಲಾಗುತ್ತಿದೆ

ಅಜ್ಜಂಪುರ ಒಳಿ 69 ಕಿ ಮೀ ಉದ್ದದ ಸುರಂಗ ನಿರ್ಮಿಸಲು ಯೋಜಿಸಲಾಗಿದೆ

ಉ) ಈ ಯೊಜನೇಯ ಸುರಂಗ ಮಾರ್ಗದ ಮೂಲಕ ನೀರು ತೆಗೆದುಕೊಂಡು ಹೋದ ಪಕ್ಷದಲ್ಲಿ ಬಾಗೂರು ನವಿಲೆಯಲ್ಲಿನ ಅಂತರ್ ಜಲದ ಅಪಾಯವು ಕ್ಷೇತ್ರದ ಜನತೆಗೆ ಕಾಡುತ್ತಿದೆಯೇ

ಪರಿಣಿತರ ಸಮೀತಿಯು ಎಲ್ಲಾ ಅಂಶಗಳನ್ನು ಪರಿಶಿಲಿಸಿತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದ್ದು ಕಾಮಗಾರಿಯ ಅನುಷ್ಟಾನದ ಸಮಯದಲ್ಲಿ ಸೂಕ್ತ ಎಚ್ಚರಿಕೆಗಳನ್ನು ಕೈಗೊಂಡು ಮುಂದುವರೆಯಲಾಗುವುದು

ಊ) ಈ ಸುರಂಗ ಮಾರ್ಗ ಬಿಟ್ಟು ಲಿಫ್ಟ್ ಮೂಲಕ ನೀರನ್ನು ಹೋಗಬಹುದಲ್ಲವೇ,

ವಿವಿಧ ಪರ್ಯಾಯಗಳನ್ನು ಪರಿಶೀಲಿಸಿದ ನಂತರವೇ ಈ ಪ್ರಸ್ತಾವನೆಯನ್ನು ಅಂತಿಮಗೊಳಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1216(1572)**
ಸದಸ್ಯರ ಹೆಸರು **ಶ್ರೀ ಸಿದ್ದುಸವದಿ(ಜಮಖಂಡಿ)**
ಉತ್ತರಿಸುವವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ತುಂಗಳ–ಸಾವಳಗಿ ಏತ ನೀರಾವರಿ ಯೋಜನೆಗಾಗಿ ಖರ್ಚು ಮಾಡಲು ನಿರ್ಧರಿಸಿರುವ ಒಟ್ಟು ಹಣವೆಷ್ಟು?

ಈ ಯೋಜನೆಗಾಗಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ಒಟ್ಟು ಹಣ ರೂ 71 35 ಕೋಟಿಗಳು

ಆ) ಇಲ್ಲಿಯವರೆಗೆ ಮಾಡಿದ ಖರ್ಚು ಎಷ್ಟು?

ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಗೆ ಇಲ್ಲಿಯವರೆಗೆ ಮಾಡಿದ ವೆಚ್ಚ ರೂ 7 90 ಕೋಟಿಗಳು

ಇ) ಈ ಕೆಲಸ ಮಂದಗತಿಯಿಂದ ಸಾಗಿರಲು ಕಾರಣವೇನು ಹಾಗೂ ಯಾವಾಗ ರೈತರಿಗೆ ನೀರು ಕೊಡಲಾಗುವುದು

ಸಾವಳಗಿ–ತುಂಗಳ ಏತ ನೀರಾವರಿ ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿಯು ಶೇಕಡಾ 75 ರಷ್ಟು ಪೂರ್ಣಗೊಡಿರುತ್ತದೆ ಪಶ್ಚಿಮ ಕಾಲುವೆಯು ಒಟ್ಟು 7 415 ಕಿ ಮೀ ಉದ್ದವಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಪೂರ್ವ ಕಾಲುವೆಯ ಕಿ ಮೀ 0 ರಿಂದ 10 ರವರೆಗಿನ ಕಾಲುವೆ ಕೆಲಸದ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ ಉಳಿದ 14 ಕಿ ಮೀಗಳು ಕಾಲುವೆಯ ಕೆಲಸದ

ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದೆ 2007–08ರ ಸಾಲಿನಲ್ಲಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕಾರ್ಯಕ್ರಮ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗುವುದು ಈ ಏತ ನೀರಾವರಿ ಯೋಜನೆಯನ್ನು ಇನ್ನು ಒಂದೂವರೆ ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ

ಈ) ಈ ಯೋಜನೆಗೆ ಗುರುತಿಸಲಾಗಿರುವ ಜಲ ಮೂಲವಾದ ಹಿಪ್ಪರಗಿ ಬ್ಯಾರೇಜ್ ಕಡಿಮೆ ಸಾಮರ್ಥ್ಯ ಹೊಂದಿರುವುದರಿಂದ ಮುಂದೆ ನೀರಿನ ಕೊರತೆ ಆಗುವುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿಲ್ಲ ಹಿಪ್ಪರಗಿ ಯೋಜನೆಯಡಿ ನೀರಾವರಿಗಾಗಿ ನಿಗದಿಪಡಿಸಿದ ಕ್ಷೇತ್ರದಲ್ಲಿ ರೈತರು ಯೋಜನೆಯಡಿ ಬೆಳೆಯಬೇಕಾದ ಮುಂಗಾರು / ಹಿಂಗಾರು ಬೆಳೆಗಳು ಹಾಗೂ ಬೆಳೆ ಪದ್ದತಿಯನ್ನು ಅನುಸರಿಸಿದಲ್ಲಿ ನೀರಿನ ಕೊರತೆ ಉಂಟಾಗುವುದಿಲ್ಲ

ಉ) ಹಾಗಿದ್ದಲ್ಲಿ, ಮಂಜೂರು ಮಾಡಿರುವ ಅನುದಾನದಲ್ಲೇ ಹಿಪ್ಪರಗಿ ಬ್ಯಾರೇಜನ್ನು ಹೊರತುಪಡಿಸಿ ಅಲಮಟ್ಟಿ ಹಿನ್ನೀರಿನಿಂದ ನೀರಿನ ಸೌಲಭ್ಯವನ್ನು ಒದಗಿಸುವುದು ಸೂಕ್ತವಲ್ಲವೆ?

ಪ್ರಸ್ತುತ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1217(1386)

ಸದಸ್ಯರ ಹೆಸರು ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಉತ್ತರಿಸುವವರು ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಬೆಂಗಳೂರು ನಗರದ ಕೋರಮಂಗಲದಲ್ಲಿರುವ ಕ್ರೀಡಾ ಗ್ರಾಮದಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯಗಳ ಸಂಖ್ಯೆ ಎಷ್ಟು?

ಒಂದು (ಹದಿನಾಲ್ಕು ಬ್ಲಾಕ್‌ಗಳು)

ಆ) ಅವುಗಳಲ್ಲಿ ಒಟ್ಟು ಅಪಾರ್ಟ್‌ಮೆಂಟ್‌ಗಳೆಷ್ಟು?

2534

ಇ) ಇದುವರೆಗೂ ಎಷ್ಟು ಅಪಾರ್ಟ್‌ಮೆಂಟ್‌ಗಳನ್ನು ಮಾರಾಟ ಮಾಡಲಾಗಿರುತ್ತದೆ ಹಾಗೂ ಯಾವ ಆಧಾರದ ಮೇಲೆ ಮಾರಾಟ ಮಾಡಲಾಗಿದೆ,

ಎಲ್ಲಾ ಅಪಾರ್ಟ್‌ಮೆಂಟ್‌ಗಳನ್ನು ಮಾರಾಟ ಮಾಡಲಾಗಿರುತ್ತದೆ Outright sale ಆಧಾರದ ಮೇಲೆ ಮಾರಾಟ ಮಾಡಲಾಗಿದೆ

ಈ) ಮಾರಾಟವಾಗದೆ ಖಾಲಿ ಉಳಿದಿರುವ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಎಷ್ಟು

ಇಲ್ಲ